534

ಮೈಸೂರ ಗೆಜಿಟ್.

ನಂ. 32 ಸರ್ಕಾರದಿಂದ ಫಾಯಿಷ್ ಆದ್ದು. ಸನ್ 1890.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 16, ಸನ್ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟ್ಸುಗಳು ವ ರೆಗ್ಯುಲೇಷ್‌ಗಳು—1890ನೇ ಇಸವಿಯ Iನೇ ನಂಬರ್ ರೆಗ್ಯುಲೇಷ್.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—1890ನೇ ಇಸವಿಯ Iನೇ ನಂಬರ್ ಮಿಸಲಿನಿಯಸ್ ರೆಗ್ಯುಲೇಷ್.

೧ನೇ ಭಾಗ.

ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 25ನೇ ಜುಲೈ 1890.

ನಂ. 165.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸವಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ಭಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಭಿಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಪೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೇಲ್‌ನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಹುಟ್ಟುವಳಿ ಬೇರೀಜು	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿ ಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
				ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಅ. ಪೈ.	
ತುಮಕೂರು	ತುಮಕೂರು	ವಡ್ಡರಹಳ್ಳಿ	ತತ್ಕಾಲದ ಹಿಡುವಳೀದಾರರು ನಂಜುಂಡಯ್ಯ ಇತರ ಮೂರು ಮಂದಿ	17 15 15½	150 0 0 ಲೋಕಲ್‌ಸೆಸ್ 15 0 0	ಜೋಡಿ 101 0 0 11 0 0 112 0 0		1890ನೇ ಇಸವಿ ಸೆಪ್ಟಂಬರ್ 22ನೇ ಮರ್ತು ಮಿನಲ್ಲಿ ತುಮಕೂರು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾಸ್ರ ರೂಬರೂ.
							1884—85ನೇ ಸಾಲಿಗೆ	54 15 0
							1885—86ನೇ ಸಾಲಿಗೆ	33 0 8
							1886—87ನೇ ಡಿಟೋ	53 5 10
							1887—88ನೇ ಡಿಟೋ	28 0 2
							1888—89ನೇ ಡಿಟೋ	28 0 2
							1889—90ನೇ ಡಿಟೋ	112 0 9
							ನೋಟೀಸ್ ಫಿ	1 0 0
							ಟೋಟಲ್	310 7 7
							ಮತ್ತು ಹರಾಜು ತಾರೀಖು ವರಿನಿಗೆ ಬಡ್ಡಿ	

ಪರಾ.—ಜೋಡಿದಾರರುಗಳಿಂದಲಾಗಲಿ, ಅಥವಾ ಬಾಧ್ಯತೆಯ ಮೂಲಕ ಇವರ ಪೂರ್ವೀಕರಿಂದಲಾಗಲಿ ಉಂಟು ಮಾಡಲ್ಪಟ್ಟ ಯಾವ ದೇಣಿಗಳಿಗಾಗಲಿ ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ವಳಪಟ್ಟಿರುವದಿಲ್ಲವು.

ತಾರೀಖು 13ನೇ ಜುಲೈ 1890.

ನಂ. 151.—1870ನೇ ಇಸವಿಯ 10ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮವನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಬೆಂಗಳೂರು ತಾಲ್ಲೂಕು ಹನುಮಂತಾಪುರ ಗ್ರಾಮಕ್ಕೆ ಶೇರಿದ ಇದಕ್ಕೆ ಸೇರಿಸುವ ತಖ್ತೆಯಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಷಹರನ್ನ ಉತ್ತರದಿಕ್ಕಿನಲ್ಲಿ ಬಡಾಯಿಸುವ ಬಗ್ಗೆ ಬೇಕಾಗಿರುತ್ತೆ.—

ಚಿತುರ್ಗಡಿ ಪೂರ್ವಕ್ಕೆ ರಾಮಸ್ವಾಮಯ್ಯಂಗಾರ್ರ ಭೂಮಿ ಮತ್ತು ಪಟನಗರ ಛತ್ರ, ಪಶ್ಚಿಮಕ್ಕೆ ತುಮಕೂರು ರಸ್ತೆ ಉತ್ತರಕ್ಕೆ ಮೆಸ್ಸರ್ಸ್ ಕೃಷ್ಣಯ್ಯಂಗಾರ್ ವ ನರಸಿಂಹಯ್ಯಂಗಾರ್ರವರಿಗೆ ಕೇರಿದ ನಿವೇಕನ, ದಕ್ಷಿಣಕ್ಕೆ ಗೋದೂರಯ್ಯನ ಮಠ—

ನಂಬರ್.	ಯಾವ ಪ್ರದೇಶ.	ಸ್ವಂತಗಾರರ ಹೆಸರು.	ಸ್ಕೀಮ್ ನಂಬರು.	ವಿಸ್ತೀರ್ಣ. ಎಕರೆ.	ಗುಂಟೆ.	ಪಟ್ಟಾ ಮಾಡಿಕೊಟ್ಟ ಭೂಮಿ.	ಕಂದಾಯ.			ಷರಾ.
1	ಬಳೇಪೇಟೆ ಡಿವಿಜ್.	ತರಗಿನ ಸಂಜೀವಯ್ಯ.	24	5	4	ಖುಷ್ಕಿ ಭೂಮಿ.	9	0	0	ಸಂಜೀವಯ್ಯ ಮತ್ತು ಶಾಮಂಣನವರ ಅನುಭವದಲ್ಲಿರುತ್ತೆ.
2	ಡಿಟೋ	ಮಳವಳ್ಳಿ ತಿಮ್ಮಪ್ಪನ ಮಗ ಚಿಕ್ಕಗಿರಿಯಪ್ಪ.	26ನೇ ನಂ ಭರ್ ಪೈಕಿ	5	39	ಡಿಟೋ	9	4	0	ಚಿಕ್ಕಗಿರಿಯಪ್ಪನ ಅನುಭವದಲ್ಲಿರುತ್ತೆ.
3	ಗೋದೂರಯ್ಯನಮಠ	ಮಠದ ಟ್ರಸ್ಟಿಗಳು	0	2	24	ಡಿಟೋ	4	0	0	ಮಠದ ಟ್ರಸ್ಟಿಗಳು.
		ಜುಮ್ಲಾ ..	..	13	27	..	22	4	0	

ತಾರೀಖು 19ನೇ ಜುಲೈ 1890.

ನಂ. 156.—ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ಹುಕ್ಕುಂ ಮಾಡುವದೇನಂದರೆ, 1878ನೇ ಇಸವಿಯ ಫಾರೆಸ್ಟ್ ನಿಬಂಧನೆಗಳ 23ನೇ ಸೆಕ್ಷನ್ ಅನುಸರಿಸಿ ಮಾಡೋಣಾಗಿರುವ ಪ್ರಪನಿಬಂಧನೆಗಳು ಚಿತ್ರದುರ್ಗ ಡಿಸ್ಟ್ರಿಕ್ಟ್ ಪೈಕಿ ಇದರಡಿ ನಮೂದಾಗುವ ಜಂಗಲ್‌ಗಳಿಗೆ ಲಗಾವಾಗಿರತಕ್ಕದ್ದು.

ಕಾಪಾಡಲ್ಪಟ್ಟಿರುವ ಜಂಗಲಿ ಪ್ರದೇಶದ ಹೆಸರು.	ಗ್ರಾಮ.	ವಿವರ. ಸರ್ವೇ ನಂಬರ್.	ವಿಸ್ತೀರ್ಣ. ಎಕರೆ.	ಗುಂಟೆ.	ಕಾಪಾಡಲ್ಪಟ್ಟಿರುವ ಜಂಗಲ್ ಪ್ರದೇಶದ ಚಕ್ಕುಬಂದಿ.
ಪ್ರೋಟೆಕ್ಟೆಡ್ ಸುಜ್ಞ.	ಕುರುಬರ ಮರಡೀಕೆರೆ ..	28	754	14	ಪೂರ್ವಕ್ಕೆ—ಕುರುಬರೆ ಮೆರಡಿಕೆರ ಗಡಿ
	ಹಿಂಡಿಗನಾಡು ..	24	393	35	
	ಡಿಟೋ ..	25	697	32	ಪಶ್ಚಿಮಕ್ಕೆ—ರಾಜೆಹರವು ಬಸವನಹಳ್ಳಿ ವ ಯಲಕನೂರಹಳ್ಳಿ ಗಡಿಗಳು
	ರಾಮಪುರ ..	9	190	0	
	ಯರೇಹಳ್ಳಿ .	24	1122	37	
	ದೊಡ್ಡಾಪುರ ..	9	66	34	ಉತ್ತರಕ್ಕೆ—ಹುಂಡಿಗನಾಡು ದೊಡ್ಡಾಪುರ ಯರೇಹಳ್ಳಿ ಸೊಂಡೆಕೊಳ ಬೆಳ್ಳಹಡ್ಲು ವ ಅಬಂದನಹಳ್ಳಿ ಗಡಿಗಳು
	ಡಿಟೋ ..	11	232	33	
	ಡಿಟೋ ..	13	148	8	
	ಡಿಟೋ ..	15	150	8	
	ಡಿಟೋ ..	16	251	21	
	ಡಿಟೋ ..	17	507	0	ದಕ್ಷಿಣಕ್ಕೆ—ಚಿಕ್ಕಛಿದ್ದವ್ವನಹಳ್ಳಿ ತಿಕಲವಟ್ಟಿ ವ ಕೊಲಹಾಲ್ ಗಡಿಗಳು
	ಡಿಟೋ ..	18	440	31	
	ಡಿಟೋ ..	19	166	17	
	ಡಿಟೋ ..	20	90	16	
	ಡಿಟೋ ..	23	81	15	
	ಕಿಲ್ಲೆಹಡ್ಲು ..	27	105	14	
	ಡಿಟೋ ..	28	88	22	
	ಡಿಟೋ ..	29	62	36	
	ಡಿಟೋ ..	30	312	11	
	ಡಿಟೋ ..	32	61	9	
	ಡಿಟೋ ..	35	591	10	
	ಡಿಟೋ ..	53	841	22	
	ಡಿಟೋ ..	54	678	26	
	ಡಿಟೋ ..	56	62	29	
	ಡಿಟೋ ..	64	63	11	
	ಡಿಟೋ ..	68	697	38	

ತಾರೀಖು 31ನೇ ಜುಲೈ 1890.

ನಂ. 170.—1890ನೇ ಇಸವಿ ಜುಲೈ 17ನೇ ಮಕ್ತುಂ 140ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ವರದರಾಜಯ್ಯಂಗಾರ್ರಿಗೆ ಕೊಡಲ್ಪಟ್ಟ ಹತ್ತು ದಿವಸಗಳ ಕಾಜುಯಲ್ ರಜಾವನ್ನ ಅವರ ಖಾಯಿಷ್ ಮೇರೆ ರದ್ದು ಮಾಡಲ್ಪಟ್ಟಿರುತ್ತೆ.

ನಂ. —ಮೆಸ್ಟರ್ ಬಿ. ಕೃಷ್ಣಯ್ಯಂಗಾರ್ರವರು, ಮೈಸೂರು ಪಟ್ಟಣ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟ್ ಆಫೀಸಿನ ಚಾರ್ಜನ್ನು 1890ನೇ ಇಸವಿ ಜುಲೈ 5ನೇ ಮಕ್ತುಮಿನ ಮಧ್ಯಾನ್ಹಾತ್ಪರ ಮೆಸ್ಟರ್ ಸ್ಟ್ಯಾಂಡಿಷ್ ಲೀ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 2ನೇ ಆಗಸ್ಟು 1890.

ನಂ. 168.—ಮೈಸೂರು ದಿವಾಣರವರ ಚೀಫ್ ಸೆಕ್ರಟೇರಿಯವರಾದ, ಮೆಸ್ಟರ್ ಟಿ. ಆನಾಂದರಾವ್ ಬಿ. ಎ. ಯವರಿಗೆ, 1890ನೇ ಇಸವಿ ಜುಲೈ 31ನೇ ಮಕ್ತುಂ 167ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ 2 ದಿವಸಗಳ ಜಾಸ್ತಿ ಕ್ಯಾಜುಯಲ್ ರಜಾವು ಯಿನ್ನು ಮೂರುದಿವಸಗಳ ಪರಿಯಂತಾ ಹೆಚ್ಚಿಸಲ್ಪಟ್ಟಿರುತ್ತೆ.

ನಂ. 172.—ಯಡೆಹಳ್ಳಿ ಮುನ್ಸಿಫ್ ಸಿ. ರಾಮರಾಯರಿಗೆ, ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ವೆಂಟುಮಾಡಲ್ಪಟ್ಟಿರುತ್ತೆ.

ತಾರೀಖು 3ನೇ ಆಗಸ್ಟು 1890.

ನಂ. 173.—ಚೀಫ್ ಕೋರ್ಟ್ ಅಡ್ವೋಕೇಟರುದ ಹೆಚ್. ತಿಮ್ಮಕೃಷ್ಣರಾವ್ ಬಿ. ಎ, ಬಿ. ಯಲ್. ಯವರು ರಾಜೀನಾಮೆಕೊಟ್ಟ ಯಸ್. ನಾರಾಯಣರಾಯರಿಗೆ ಬದಲಾಗಿ ಮೂರನೇ ಕ್ಲಾಸ್ ಮುನ್ಸಿಫರಾಗಿ ವೊಕರರ್ಯಾಡಲ್ಪಟ್ಟು ಕೋಲಾರಕ್ಕೆ ನಿಯಮಿಸಲ್ಪಟ್ಟಿರುತ್ತಾರೆ.

ತಾರೀಖು 4ನೇ ಆಗಸ್ಟು 1890.

ನಂ. 169.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ಷನ್ ಆಕ್ಟಿನ 4ನೇ ಸೆಕ್ಷನ್ ಅನುಸರಿಸಿ ಯಿದಕ್ಕೆ ಸಂಬಂಧಪಟ್ಟ ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಬೆಂಗಳೂರಿಂದ ಹಿಂದೂಪುರದವರಿಗೆ ರೈಲ್ ರಸ್ತೆಯನ್ನ ತಯಾರ್ಮಾಡುವ ವಬ್ಯಾಗ್ಯಾಗಿ ಬೇಕಾಗಿರುವ ತಮಾಂ ಜಮೀನುಗಳೂ ಸದರೀ ಮೇಲ್ಕಂಡ ಆಕ್ಟನುಸರಿಸಿ ಆ ಬಗ್ಯಾಗಿ ಈಡು ಮೊಬಲಗು ಪಾವತೀ ಮಾಡಲ್ಪಟ್ಟು ತರುವಾಯ ತೆಗದುಕೊಳ್ಳಲ್ಪಡುವನ್ನು, ಮತ್ತು ಮೇಲ್ಕಂಡ ರೈಲ್ ರಸ್ತೆಯನ್ನು ಹಾಲಿ ತಯಾರ್ಮಾಡುತ್ತಿರುವವರು, ಅವರ ಕೆಲಸಗಳನ್ನೆ ನಡಿಸದಂತೆ ಯಾವ ವಿಧವಾಗಿಯೂ ಯಾರಿಂದಲೂ ಅಡ್ಡಿ ಪಡಿಸಲ್ಪಡಕೂಡದು.

ನಂ. 171.—ತಪ್ಪುದುರಸ್ತು,—1890ನೇ ಇಸವಿ ಆಗಸ್ಟು 2ನೇ ಮಕ್ತುಂ ಮೈಸೂರು ಗೆಜೆಟ್ಟಿನ 300ನೇ ಪುಟದಲ್ಲಿ ಛಾಯಿಷ್ಮಾಡಲ್ಪಟ್ಟು 1890ನೇ ಇಸವಿ ಜುಲೈ 18ನೇ ಮಕ್ತುಂ 154ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ "1890ನೇ ಇಸವಿ ಜೂ 28ನೇ ತಾರೀಖು ಲಾಗಾಯತು" ಯಂಬದಕ್ಕೆ ಬದಲಾಗಿ "1890ನೇ ಇಸವಿ ಜೂ 25ನೇ ಮಕ್ತುಂ ಲಾಗಾಯತು" ಯಂದು ಓದಿಕೊಳ್ಳತಕ್ಕದ್ದು.

ನಂ. 174.—ಚಿತ್ರದುರ್ಗದ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಯ್. ವೆಂಕಟರಾಯರು ಅವರಿಗೆ, 1890ನೇ ಇಸವಿ ಜನವರೀ 31ನೇ ಮಕ್ತುಂ ಮತ್ತು ಜೂ 23ನೇ ಮಕ್ತುಂವುಳ್ಳ 315 ಮತ್ತು 87ನೇ ನಂಬರ್ ಇಸ್ತಿಹಾರ್‌ನಾಮೆಗಳಿಂದ ಕೊಡಲ್ಪಟ್ಟ ಮೂರು ತಿಂಗಳು ಯಂಟು ದಿವಸಗಳ ಬಗರ್ ತಲಬಿನ ವಿಕೇಷ ರಜಾಕ್ಕೆ ಜಾಸ್ತಿಯಾಗಿ ಇನ್ನೂ ಒಂದು ತಿಂಗಳು ಒಂದು ದಿವಸದ ರಜಾ ಕೊಡಲ್ಪಟ್ಟಿರುತ್ತಾರೆ.

ಹುಕ್ಕುಂ ಬಮೋಜೇಬ್,
ಟಿ. ಆನಂದರಾವ್,
ಚೀಫ್ ಸೆಕ್ರಟೆರಿ.

ವಿದ್ಯಾಭ್ಯಾಸದ ಇಲಾಖೆ.

ಸ್ಯ 1890ನೇ ಇಸವಿ ಜುಲೈ ತಾರೀಖು 26.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀಯ ಪರೀಕ್ಷಾ ಕಾಲಗಳ ಬದಲಾವಣೆಗಳು.

ಸ್ಯ 1891ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆಯುವ ಮೈಸೂರು ದೇಶೀ ಪರೀಕ್ಷೆಗಳು ಪೂರೈಸಿದನಂತರ, ಸದರೀ ಪರೀಕ್ಷೆಗಳ ನವಂಬರ್ ತಿಂಗಳಲ್ಲಿ ನಡೆಸಲ್ಪಡುತ್ತವೆ. ಮತ್ತು ನವಂಬರ್ 24ನೇ ತಾರೀಖಿನಲ್ಲಿ ಅಥವಾ 24ನೇ ತಾರೀಖು ಭಾನುವಾರ ವಾದಲ್ಲಿ 25ನೇ ತಾರೀಖಿನಲ್ಲಿ ಆರಂಭಿಸಲ್ಪಡುತ್ತವೆ.

ಹೆಚ್. ಜೆ. ಭಾಭಾ,
ಎಜ್ಯುಕೇಷನ್ ಸೆಕ್ರಟೆರಿ.